ಕುಳಿತು ಊರನ್ನು, ತವರಿನವರನ್ನು ನೆನೆಯುವುದು ಖುಷಿ ಕೊಡುತ್ತಿತ್ತು. ಆ ಮನೆಯಲ್ಲಿದ್ದಾಗಲೇ ಮೈ ನವಿರೇಳಿಸುವ ಅಂತಹದೊಂದು ರಾತ್ರಿ ಬಂದದ್ದು! ಮನೆಯಲ್ಲಿ ಎಲ್ಲರಿಗೂ ಭಯಂಕರ ಜ್ವರ. ಔಷಧಿಗಳಿಗೆ ಬಗ್ಗದೇ ಸುಮಾರು ಹದಿನೈದು ದಿನ ಕಂಗಾಲಾಗಿಸಿದ ಜ್ವರವನ್ನು ಎಂದೂ ಕರೆಯಲಾಗುವುದಿಲ್ಲ. ಅಂತಹ ರಾತ್ರಿಯೊಂದರಲ್ಲಿ ಭಯಾನಕವಾದ ಕೂಗೊಂದು ಕೇಳಿಬಂದಿತ್ತು. ಅದರ ತೀವ್ರತೆ ಎಷ್ಟಿತ್ತೆಂದರೆ ಬೆನ್ನುಹುರಿಯಿಂದ ನಡುಕವೆದ್ದು ಬಂದಿತ್ತು. ಮೊದಲೇ ಜ್ವರದಿಂದ ನಿತ್ರಾಣಗೊಂಡಿದ್ದ ನಾನು ಇಡೀ ರಾತ್ರಿ ಭಯದಲ್ಲಿ ಎದ್ದು ಕೂತಿದ್ದೆ. ದೆವ್ವ, ಭೂತಗಳನ್ನು ಎಂದೂ ನಂಬದ ಜಾಯಮಾನ ನನ್ನದು. ಆದರೆ ಆ ಸಂದರ್ಭದಲ್ಲಿ ಅಕ್ಕಪಕ್ಕದ ಮನೆಯವರು ದೆವ್ವಗಳ ಬಗ್ಗೆ ಹೇಳುತ್ತಿದ್ದ ಕಥೆಗಳೆಲ್ಲಾ ನೆನಪಿಗೆ ಬಂದು ಮೆದುಳು ಕಲಸುಮೇಲೊಗರವಾಗಿತ್ತು! ನಿಗೂಢತೆ, ರಹಸ್ಯ ಎಂಬ ಪದ ಕೇಳಿದಾಗೆಲ್ಲಾ ಆ ಭಯಾನಕ ರಾತ್ರಿ, ಆ ಮನೆ ನೆನಪಾಗುತ್ತದೆ.

ಕರಾವಳಿಯ ಒಂದೂರಲ್ಲಿ ನಾವು ಬಿಡಾರ ಹೂಡಿದ್ದ 'ಬೆಕ್ಕಿನ ಮನೆ'ಯೊಂದು ಸದಾ ಕಾಡುತ್ತದೆ. ವಿಶಾಲವಾದ ನಾಲ್ಕು ಬೆಡ್‌ರೂಮುಗಳ ಮನೆಯದು. ಮನೆಯ ಸುತ್ತ ಗಿಡಮರಗಳು. ಇಲ್ಲಿದ್ದಾಗ ಏಳೆಂಟು ಬೆಕ್ಕುಗಳನ್ನು ಸಾಕಿದ್ದೆವು. ಪ್ರೀತಿಯ ಬೆಕ್ಕು ಮುಸುವ, ನಾಯಿ ಪಪ್ಪು ಎಲ್ಲರೂ ಆ ಪರಿಸರದಲ್ಲೇ ಸಿಕ್ಕಿ ಸುಮಾರು ವರ್ಷ ನಗಿಸಿ ಕೊನೆಗೊಮ್ಮೆ ಅಳಿಸಿ ಹೊರಟುಹೋದರು. ಮಕ್ಕಳ ಹಾಗೆ ಪ್ರೀತಿಯಿಂದ ಕೆಂಚ, ಕರಿಯ, ಮಿಂಚು, ಪೈಲ್ವಾನ್ ಕಿಟ್ಟಪ್ಪ, ಬೆಳ್ಳಿ, ನಿತ್ರಾಣ್ ಎಂದೆಲ್ಲಾ ಹೆಸರಿಟ್ಟ ಬೆಕ್ಕುಗಳಲ್ಲಿ ಯಾರೋ ಇಟ್ಟ ವಿಷ ತಿಂದು ಸತ್ತಾಗ ಹೇಳತೀರದ ದುಃಖ ಮಡುಗಟ್ಟಿತ್ತು. ಪಪ್ಪು ವಿಷ ತಿಂದರೂ ಬದುಕಿ ಬಂದದ್ದು ಈ ಬೆಕ್ಕಿನ ಮನೆಯಲ್ಲೇ. ಪಪ್ಪು ಬದುಕುಳಿಯಲು ಅವಳು ವಿಷ ತಿಂದ ದಿನ ಆಕಸ್ಮಿಕವಾಗಿ ನಾನು ರಜೆಯಲ್ಲಿ ಇದ್ದದ್ದು ಒಂದು ಕಾರಣವಾದರೆ, 'ಉಪ್ಪು ನೀರು ಕುಡಿಸು' ಎಂದು ಸೂಕ್ತ ಸಮಯಕ್ಕೆ ಫೋನಲ್ಲಿ ಸಲಹೆ ನೀಡಿದ ಅಕ್ಕ, ವಾಂತಿ ಮಾಡುತ್ತಿದ್ದ ಪಪ್ಪುವಿನೊಂದಿಗೆ ನನ್ನನ್ನು ಆಸ್ಪತ್ರೆಗೆ ಕರೆದೊಯ್ದ ಮಾನವೀಯ ರಿಕ್ಷಾ ಡ್ರೈವರ್, ಲಗುಬಗೆಯಿಂದ ಓಡಿಬಂದು ಚಿಕಿತ್ಸೆ ನೀಡಿದ ವೈದ್ಯರು, ಎಲ್ಲರೂ ಎಲ್ಲವೂ ಆಕಸ್ಮಿಕ ಕಾರಣಗಳು. ಹೀಗೆ ಬೆಕ್ಕಿನಮನೆ ಆಪ್ತವಾಗಿ ಪೊರೆದದ್ದು ನನ್ನ ಕಾವ್ಯಲೋಕ ಅಲ್ಲಿ ಹೊಸತಾಗಿ ಅರಳಿದ್ದು ಎಲ್ಲವೂ ಮೆದುಳಲ್ಲಿ ಅಚ್ಚಾಗಿದೆ.

ಇದೇ ಊರಲ್ಲಿ ನಾವಿದ್ದ ಇನ್ನೊಂದು ಚೆಂದದ ಮನೆಯೇ 'ಹಕ್ಕಿಮನೆ'. ಪ್ರಕೃತಿಯಲ್ಲಿ ಅದ್ದಿ ತೆಗೆದಂತಿದ್ದ ಆ ಮನೆಯ ಸಿಟೌಟ್ ಕಂಬಕ್ಕೆ ನಾವು ಕಟ್ಟಿದ ರೊಟ್ಟಿನ ಪೆಟ್ಟಿಗೆಯನ್ನು ಮಡಿವಾಳ ಹಕ್ಕಿಗಳು ಸ್ವೀಕರಿಸಿ ಅದರೊಳಗೆ ನಾರು ಬೇರು ತಂದು ಹಾಕಿ ಗೂಡು ಕಟ್ಟಿದವು. ಮೊಟ್ಟೆಯಿಟ್ಟು ಮರಿ ಮಾಡಿ, ಆ ಮರಿಗಳು ದೊಡ್ಡದಾಗಿ ಹಾರಿಹೋದ ಮೇಲೆ ಗೂಡು ಖಾಲಿಯಾಯಿತು. ಇದನ್ನೆಲ್ಲಾ ಖುಷಿಯಿಂದ ಗಮನಿಸುತ್ತಿದ್ದ ನಾನು ಇನ್ನು ಇದು ಖಾಲಿ ಗೂಡು ಎಂದುಕೊಂಡರೆ ನಂಬಿಕೆ ಉಲ್ಟಾ ಹೊಡೆಯಿತು. ಎರಡೇ ದಿನದಲ್ಲಿ ಇನ್ನೊಂದು ಮಡಿವಾಳ ಹಕ್ಕಿ ನಾರು ಹಿಡಿದು ಪ್ರತ್ಯಕ್ಷವಾಯಿತು! ಕಾಡುಹಕ್ಕಿಗಳು ಮನುಷ್ಯನ ಮೇಲೆ ನಂಬಿಕೆಯಿಟ್ಟ ಬಹುಮುಖ್ಯ ಕಾರಣಕ್ಕಾಗಿ ಈ ಘಟನೆ ಸದಾ ಸ್ಮೃತಿಯಲ್ಲುಳಿಯುತ್ತದೆ. ಈ ಹಕ್ಕಿ ಮನೆಯ ಹಿಂಬಾಗಿಲವರೆಗೂ ನವಿಲುಗಳು ನಡೆದು ಬರುತ್ತಿದ್ದವು. ಅಳಿಲು, ಮುಂಗುಸಿಗಳು ಅಂಗಳದಲ್ಲೇ ಓಡಾಡುತ್ತಿದ್ದವು. ತಾರಸಿ ಮೇಲಿನ ಬೆಳದಿಂಗಳ ಲೋಕ, ಕಾಂಪೌಂಡ್‌ಗಳನ್ನು ಕಾಲುಹಾದಿಯಾಗಿಸಿಕೊಂಡು ಬರುತ್ತಿದ್ದ ಬೆಕ್ಕು, ನಾಯಿಗಳು ಎಲ್ಲವೂ ಹೊಸ ಹೊಳಹುಗಳನ್ನು ತೋರಿಸುತ್ತ ತ್ರಿಪದಿ, ಹಾಯ್ಕುಗಳನ್ನು ಬರೆಸಿದವು. ಹಕ್ಕಿಮನೆಯ ಅಂಗಳದ ಬೆಳದಿಂಗಳಿನಲ್ಲಿ ಮನೆಮಂದಿ ಕುಳಿತು ನಡೆಸುತ್ತಿದ್ದ ಕಾಡುಹರಟೆ ಅದ್ಭುತವಾಗಿತ್ತು. ಬೆಳಗು, ಮಧ್ಯಾಹ್ನ, ಸಂಜೆ, ರಾತ್ರಿಯೆನ್ನದೆ ಮೂವತ್ತು–ನಲವತ್ತು ನಿಮಿಷಗಳಿಗೊಮ್ಮೆ ಕೂಗುವ ಜಾವದ ಕೋಳಿಗಳು ಆ ಮನೆಯ ಪರಿಸರದಲ್ಲಿದ್ದವು. ಅವೇನು ಕಾಡುಕೋಳಿಗಳೋ ಅಥವಾ ಊರಿನವೋ ಇಂದಿಗೂ ತಿಳಿಯುತ್ತಿಲ್ಲ!

'ಹಕ್ಕಿಮನೆ' ಮಾಲಿಕರು ಒತ್ತಡ ಹಾಕಿದಾಗ ಆ ಮನೆ ಬಿಟ್ಟು ಹೊರಡಲೇ ಬೇಕಾದ ಅನಿವಾರ್ಯ ಪರಿಸ್ಥಿತಿ ಬಂದಿತ್ತು. ಆಗ ಕೊರಳ ಸೆರೆ ಉಬ್ಬಿ ನಮ್ಮ ಸ್ವಂತ ಮನೆಯನ್ನೇ ಅಗಲುತ್ತಿದ್ದೇವೆಂಬಷ್ಟು ನೋವಾಗಿತ್ತು. ಹಕ್ಕಿ ಗೂಡೆಂಬ ರಟ್ಟಿನಪೆಟ್ಟಿಗೆಯನ್ನು ಬಿಚ್ಚಿಕೊಂಡು ಹೊಸ ಮನೆಗೆ ಬರುವಾಗ ತಂದೆವು. ಹೊಸ ಬಾಡಿಗೆ ಮನೆಯೂ ನಿಸರ್ಗದ ಸಾನಿಧ್ಯದಲ್ಲೇ ಸಿಕ್ಕಿದ್ದು ಅದೃಷ್ಟ. ಹಾಗಾಗಿ ಇದನ್ನು 'ಹಕ್ಕಿಮನೆ–2' ಎಂದು ಕರೆಯಬಹುದು. ಈ ಮನೆಯ ಸಿಟೌಟ್ ಕಂಬಕ್ಕೆ ಮತ್ತೆ ಅದೇ ರಟ್ಟಿನ ಪೆಟ್ಟಿಗೆಯನ್ನು ಸುಮ್ಮನೆ ಹಳೆಹಕ್ಕಿಗಳ ನೆನಪಿಗೆಂದು ಕಟ್ಟಿದೆವು. ಆದರೆ ಪರಿಣಾಮವೇ ಬೇರೆಯಾಯಿತು. ವಾರವೊಂದರಲ್ಲಿ ಮತ್ತೊಂದು ಮಡಿವಾಳ ಹಕ್ಕಿ ಜೋಡಿ ನಾರು ತಂದು ಹಾಕತೊಡಗಿತು. ಅಂದಿನ ಖುಷಿ ಮಾತುಗಳನ್ನು ಮೀರಿತ್ತು. ಅದಾದ ಮೇಲೆ ಕಾಡುಮುನಿಯ ಹಕ್ಕಿಗಳು ಬಂದವು. ಹೀಗೆ ಐದಾರು ಸಂಸಾರಗಳು ರಟ್ಟಿನ ಪೆಟ್ಟಿಗೆಯಲ್ಲಿ ಮೊಟ್ಟೆ ಮರಿಮಾಡಿದವು.

**'ಹಕ್ಕಿಮನೆ ಹಕ್ಕಿ ಮನಸ್ಸು' ಪ್ರಬಂಧವು ಇಂದಿನ ಅತಿನಾಗರಿಕ ಬದುಕು ಕಳೆದುಕೊಂಡಿದ್ದು ಅದೆಷ್ಟು ಅಮೂಲ್ಯವಾದದ್ದೆಂಬುದನ್ನು ಕಾಣಿಸುತ್ತದೆ. ಈ ಲೋಕದ ಸಕಲೆಂಟು ಜೀವಜಾತಗಳೊಂದಿಗೆ ಬೆರೆತು ಬದುಕಬೇಕಿದ್ದ ಮನುಷ್ಯನ ದುರಹಂಕಾರದ ಕಾರಣದ ಅಧಃಪತನವನ್ನು ಎಲ್ಲೂ ಮಾತಾಗಿಸದೆ, ಅಂದಿನ ಬಾಳಿನ ಸೊಬಗಿನ ಮೂಲಕ ಮನನ ಮಾಡಿಸುವ ತ್ರಾಣ ಈ ಬರಹಕ್ಕಿದೆ.**

**-ವಿನಯಾ ಒಕ್ಕುಂದ**

ಸಿಟೌಟಲ್ಲಿ ಕುಳಿತು ಕತ್ತಲನ್ನು ಧ್ಯಾನಿಸುವ ಹೊತ್ತಲ್ಲಿ ಪಕ್ಕದಲ್ಲೇ ಕಾಡುಹಕ್ಕಿಗಳ ಪಿಸುದನಿ ರೋಮಾಂಚನಗೊಳಿಸುತ್ತಿತ್ತು. ಇವೆಲ್ಲವನ್ನು ನೋಡುತ್ತ ನಿಸರ್ಗದ ಸ್ಪರ್ಶ ಅದ್ಭುತವೆನಿಸುತ್ತದೆ.

ಕೊನೆಗೂ ಮರಗಿಡಗಳ ಮಧ್ಯೆ ಒಂದಷ್ಟು ಕೃಷಿ ಜಾಗ ಕೊಂಡುಕೊಂಡು ಸರಳಾತಿಸರಳ ಮನೆ ಕಟ್ಟಿಕೊಳ್ಳುವ ಇಷ್ಟದ ಕಾಲಘಟ್ಟದಲ್ಲಿ ನಮ್ಮ ಸಂಸಾರ ಬಂದು ನಿಂತಿದೆ. ಬದುಕು ನಿಸರ್ಗ ಮತ್ತು ಕಾವ್ಯಗಳನ್ನು ಪರಸ್ಪರ ಬೇರ್ಪಡಿಸಲಾಗದ ಭಾವುಕತೆಯ ನಡುವೆಯೇ ಅನೇಕ ಗೊಂದಲಗಳಿಗೂ ಉತ್ತರ ಹುಡುಕಬೇಕಾಗಿದೆ. ಇವತ್ತಿನ ಜಾಗತಿಕ ಮಾರುಕಟ್ಟೆ ತೆರೆದುಕೊಂಡ ಜನಜೀವನದ ಮನಸ್ಸು ದುಡ್ಡಿನ ಅಳತೆಗೋಲಿನಲ್ಲೇ ಎಲ್ಲವನ್ನು ಅಳೆಯುತ್ತಿದೆ. ಊಟ, ವಸತಿ, ಬಟ್ಟೆ, ಮಾಡಲೊಂದು ಕೆಲಸ ಇಷ್ಟಿದ್ದರೆ ಸಾಕೆಂಬ ಇವತ್ತಿನ ಪ್ರಪಂಚ ಉಳಿದಿಲ್ಲ. 'ಇನ್ನೂ ಮತ್ತಷ್ಟು ಬೇಕು' ಎಂಬ ಕೊಳ್ಳುಬಾಕುತನ ಲಗ್ಗೆಯಿಟ್ಟಿದೆ. ಮುಂದಿನ ಎರಡು ಮೂರು ತಲೆಮಾರಿಗೆ ಸಾಕಾಗುವಷ್ಟು ಈಗಲೇ ಸಂಪಾದಿಸಿಡಬೇಕೆಂಬ ಹುಚ್ಚು ಹೆಚ್ಚಾಗಿದೆ. ಹಾಗಾಗಿ ದುಡ್ಡೆಂಬ ಕಾಗದದ ಮುಂದೆ ಉಳಿದವೆಲ್ಲ ಮಂಕಾಗಿದೆ. ಮುಖ್ಯವಾಗಿ ಹಳ್ಳಿಗಳು ಖಾಲಿ ಬೀಳುತ್ತಿವೆ, ನಗರಗಳು ತುಳುಕುತ್ತಿವೆ. ಕಾವ್ಯ ಸದ್ಯದ ಅನ್ನ ಹುಟ್ಟಿಸುವುದು ಕಷ್ಟವಾಗುವುದರಿಂದ 'ಇದು ಬೇಕಾ?' ಎಂಬ ಜಿಜ್ಞಾಸೆಯಲ್ಲಿ ಯುವ ಜನಾಂಗವಿದೆ.

ಕಳೆದ ಶತಮಾನದಲ್ಲಿ ನಮ್ಮ ಹಿರಿಯರಿಗೆ ಕೃಷಿ ಎಂದರೆ ಬದುಕೇ ಆಗಿತ್ತು. ಬೆಳಗ್ಗೆದ್ದರೆ ಮಣ್ಣಿಗೆ ಕಾಲಿಡುವುದು ಅನಿವಾರ್ಯವಾಗಿತ್ತು. ಬಾಳೆಗಿಡಗಳು, ಮಾವು, ಹಲಸಿನ ಮರಗಳು, ಭತ್ತ, ಧವಸ ಧಾನ್ಯಗಳು, ನಾಯಿ ಬೆಕ್ಕುಗಳು, ಜಾನುವಾರುಗಳು, ಗದ್ದೆ ತೋಟ, ಇವೇ ಸಂಪತ್ತಾಗಿದ್ದವು, ಬಂಧುಬಾಂಧವರೂ ಆಗಿದ್ದವು. ಆದರೆ ಕೃಷಿಕ್ಷೇತ್ರದಲ್ಲಾದ ಪಲ್ಲಟಗಳು, ನಗರೀಕರಣ ಮುಂತಾದವೆಲ್ಲ ಸದ್ಯದ ಬದುಕನ್ನು ಬದಲಿಸಿವೆ. ಬದಲಾವಣೆಗೆ ತೆರೆದುಕೊಳ್ಳುವುದೇನೋ ಸರಿ. ಎಷ್ಟು, ಏಕೆ, ಹೇಗೆ ಎಂಬ ಚಿಂತನೆಗಳು ಬೇಕಲ್ಲ... ದೇಹಕ್ಕೆ ಮಾತ್ರ ಮನೆ, ಮನಸ್ಸಿಗಲ್ಲ ಎಂಬುದು ನಿಜ. ಆದರೆ ಮನೆ, ಮನೆಯ ಪರಿಸರ ಮನಸ್ಸನ್ನು ಪ್ರಭಾವಿಸುತ್ತದೆ. ಕಾಡಿನಲ್ಲಿ ಓಡಾಡಿಕೊಂಡಿದ್ದ ಮನುಷ್ಯನ ಜೀವಕೋಶಗಳು ಅಷ್ಟು ಸುಲಭಕ್ಕೆ ಕಾಡನ್ನು ಮರೆಯಲಾರವು. ಅದಕ್ಕೆ ನಗರಗಳು ಬೇಸತ್ತು ವಾರದ ಕೊನೆಗೆ ಜಲಪಾತಗಳನ್ನು, ಬೆಟ್ಟಗುಡ್ಡಗಳನ್ನು ಹುಡುಕಿಕೊಂಡು ಓಡಿ ಬರುವಂತಾಗಿದೆ. ಹೌದು, ನಿಸರ್ಗಕ್ಕೆ ಮರಳುವುದು ಸದಾ ಮನುಷ್ಯನ ತಹತಹಿಕೆ. ವರ್ತಮಾನದ ಬದುಕನ್ನು ಭಾವಲೋಕದ ಬದುಕಿನೊಂದಿಗೆ ಬೆರೆಸಿ ಹದ ಮಾಡಬೇಕಾದ ಅನಿವಾರ್ಯತೆ ಸದ್ಯದ ಮಾನವನಿಗಿದೆ. 'ಎಲ್ಲಿಯೂ ನಿಲ್ಲದಿರು, ಮನೆಯನೆಂದು ಕಟ್ಟದಿರು, ಕೊನೆಯನೆಂದು ಮುಟ್ಟದಿರು, ಓ ನನ್ನ ಚೇತನ, ಆಗು ನೀ ಅನಿಕೇತನ' ಎಂಬ ಕುವೆಂಪು ಅವರ ಸಾಲುಗಳನ್ನು ಧ್ಯಾನಿಸಿ ಅದರಾಳದ ಅರ್ಥವನ್ನು ತಲುಪಿಕೊಳ್ಳಬೇಕಾಗಿದೆ.